ಇಳಿದು ಓಡಾಡಬಹುದು' ಎಂದು ಆತ ಕೊಟ್ಟ ಭರವಸೆ ಶ್ರೀಕಾಂತ್ ಗೆ ಹಿಡಿಸಿ ಒಮ್ಮೆ 'ವ್ಹಾವ್' ಎಂದು ನಕ್ಕರು. ಇವರ ನಗೆ ನೀರ ಬಿಳಿ ತೆರೆಗಳಷ್ಟೇ ಮೋಹಕ.

ಅದೇನೋ ಗೊತ್ತಿಲ್ಲ. ಕಡಲ ಬದಿಯ ಮೀನಿನ ವಾಸನೆ ಕೆಲವರಿಗೆ ಒಗ್ಗುವುದಿಲ್ಲ. ಅಂತೆಯೇ ಅಲೆಗಳ ಮೇಲಿನ ಹೊಯ್ದಾಟದ ಪ್ರಯಾಣವೂ ಕೆಲವರ ದೇಹ ಪ್ರಕೃತಿಗೆ ಹಿಡಿಸುವುದಿಲ್ಲ. ಘಾಟಿ ರಸ್ತೆಯ ತಿರುವುಗಳೂ ಕೂಡ ಇದೇ ಕಥೆ. ಇದೆಲ್ಲಾ ಹೆಚ್ಚು ಅಭ್ಯಾಸ ಇಲ್ಲದ ಶ್ರೀಕಾಂತ್ ಪ್ರಯಾಣದ ನಡುವೆಯೇ ತಿಳಿಯಾದ ವಾಂತಿ ಕಾರಿಕೊಂಡು ಈಗ ಚಿತ್ತ ಪ್ರಸನ್ನರಾಗಿದ್ದರು.

ಸಮುದ್ರದ ಮೇಲಿನ ಹಕ್ಕಿಗಳ ಪಟ ತೆಗೆಯುವುದು ಒಂದು ರೋಚಕ ಅನುಭವ. ಗೋಣಿ ಚೀಲ ಹಾಸಿದ್ದ ಸಣ್ಣ ಜಾಗೆಯಲ್ಲಿ ಕುಳಿತು ಹಾರುವ ಹಕ್ಕಿಗಳ ಚಿತ್ರ ಸೆರೆ ಹಿಡಿಯುವುದು ಒಂದು ದುಸ್ಸಾಹಸ. ನಾವು ಫೋಕಸ್ ಮಾಡಿದ ಪಕ್ಷಿ ದಕ್ಕಿದ ತಕ್ಷಣದಲ್ಲೇ ದೋಣಿ ಹೊಯ್ದಾಡತೊಡಗುತ್ತದೆ. ಆದರೆ, ನಿಯಮದ ಪ್ರಕಾರ ಪಟ ತೆಗೆಯುವವರ ಕ್ಯಾಮೆರಾ ಕೊಂಚವೂ ಅಲ್ಲಾಡದೆ ಗರುಡಗಂಭದಂತೆ ನಿಂತಿರಬೇಕು. ಆಗ ಮಾತ್ರ ಸ್ಪಷ್ಟ ಚಿತ್ರ ಸಿಕ್ಕುವುದು. ಈ ತೆರನಾದ ಸಂಕಷ್ಟದಲ್ಲಿ ಹಾರುವ ಹಕ್ಕಿಯನ್ನೂ ಜೊತೆಗೆ ಅದರ ಕಣ್ಣನ್ನೂ ಫೋಕಸ್ ಮಾಡಿ ಫೋಟೊ ತೆಗೆಯುವುದು ಹರ ಸಾಹಸದ ಕೆಲಸ. ನೆಲೆಯಿಲ್ಲದ ನಾಡದೋಣಿಯ ಮೇಲೆ ಅಲೆಗಳ ನಡುಕಗಳ ಒತ್ತರಿಸಿಕೊಂಡು ಛಾಯಚಿತ್ರ ಮಾಡುವುದು ಎಷ್ಟೋ ಸಲ ಕಿರಿಕಿರಿ ಉಂಟು ಮಾಡುತ್ತದೆ. ಏಕೆಂದರೆ ಇಲ್ಲಿ ಯಾವುದೂ ನಿಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಕ್ಯಾಮೆರಾ ಕೇಳುವ ಸಕಲ ಸೌಲಭ್ಯಗಳಿಗೆ ವಿರುದ್ಧವಾದ ಜಾಯಮಾನದಲ್ಲಿ ನೀವು ಚಿತ್ರ ತೆಗೆಯುತ್ತಿರುತ್ತೀರಿ. ಹೀಗಾಗಿ ಸಾವಿರ ಪಟಗಳ ಕ್ಲಿಕ್ಕಿಸಿದರೂ ಇದರಲ್ಲಿ ಕೈಗೆ ಸಿಗಬಲ್ಲವು ಕೆಲವು ಮಾತ್ರ. ಒಟ್ಟನಲ್ಲಿ ಹೇಳುವುದಾದರೆ ಎಲ್ಲವೂ ಲಾಟರಿ ಟಿಕೇಟ್ ಖರೀದಿಸಿದಂತೆ. ಒಂದೊಮ್ಮೆ ಡ್ರಾ ಆದರೂ ಬಹುಮಾನದ ಭರವಸೆ ಇರುವುದಿಲ್ಲ.

ನಿಸರ್ಗದ ಫೋಟೊಗ್ರಫಿಯ ವ್ಯವಹಾರವೇ ಇಂತದ್ದು. ಹಲವಾರು ಅಡೆತಡೆಗಳ ಎದುರಿಸಿಯೇ ಒಳ್ಳೆಯ ಪಟ ಹೆಕ್ಕಬೇಕು. ಎಲ್ಲದಕ್ಕೂ ತಾಳ್ಮೆ ಮುಖ್ಯ. ಇಲ್ಲಿ ಅವಸರವೇ ಅಪಾಯ. ಬಹಳಷ್ಟು ಸಲ ಅನ್ನಿಸುವುದು ಬದುಕಿಗೆ ಅಗತ್ಯವಾದ ಸಹನೆ, ಸೋತರೂ ಬಿಡದ ಭಂಡ ಧೈರ್ಯ; ಹಲವು ಅಸೌಕರ್ಯಗಳ ನಡುವೆ ಗೆಲ್ಲುವ ಉಮೇದುತನವನ್ನು ಈ ಫೋಟೊಗ್ರಫಿ ಕಲಿಸುತ್ತದೆ. ಜೊತೆಗೆ ಸಣ್ಣ ಇರುವೆಯೂ, ಗೂಡು ಕಟ್ಟುವ ಒಂದು ಹಕ್ಕಿಯೂ, ಸಾಹಸದ ಬಾಳುವೆ ಮಾಡುವ ಪ್ರಾಣಿಗಳೂ ಕೂಡ ನಮ್ಮ ಬದುಕಿನ ಪಾಠ

